ಸಂಶಯ ಕಾಡುತ್ತಿದೆ. ಇವೊತ್ತು ತಕ್ಷಣ ಆ ಸ್ಟೇಯನ್ನು ವೆಕೆಂಟ್ ಮಾಡಿಸಿ ಆ ಹಣವನ್ನು ಮಹಾನಗರ ಪಾಲಿಕೆಗೆ ಕುಡಿಯುವ ನೀರಿನ ಯೋಜನೆಗೆ ಕೊಡುವಂಥ ಒಂದು ಆದೇಶವನ್ನು ತಾವುಕೊಡಬೇಕು ಎಂಬ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡಲಿಚ್ಛಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : (ಸಂಬಂಧಪಟ್ಟ ಮಂತ್ರಿಗಳು ಸಭೆಯಲ್ಲಿ ಹಾಜರಿ ಇಲ್ಲದಿದ್ದುದನ್ನು ಗಮನಿಸಿ) ಹೀಗಾದರೆ ಹೇಗೆ ಅಧ್ಯಕ್ಷರೇ, ಏನಾದರೂ ಅಂದರೆ ಜಗಳಕ್ಕೆ ಬರುತ್ತಾರೆ. ನಮ್ಮ ಅಧ್ಯಕ್ಷರ ಆಫೀಸಿನಿಂದ ಹೋಗುತ್ತದೆ, ಮಂತ್ರಿಗಳು ಇರಬೇಕಲ್ಲಾ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ಕೆಲವು ವಿಚಾರಗಳನ್ನು ಎತ್ತುತ್ತಾರೆ. ಆ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳು ಹಾಜರಿದ್ದರೆ ಅದಕ್ಕೆ ಉತ್ತರವನ್ನು ಹೇಳುತ್ತಾರೆ. ಇವೊತ್ತು ಅದಕ್ಕೆ ಸಂಬಂಧಪಟ್ಟರತಕ್ಕ ಮಾಹಿತಿ ನನ್ನಲ್ಲಿ ಇಲ್ಲ, ನಾನು ಮಾಹಿತಿಯನ್ನು ತಂದುಕೊಡುತ್ತೇನೆ. ಕಾನೂನು ಇಲಾಖೆಗೆ ಸಂಬಂಧಪಟ್ಟಹಾಗೆ ಯಾವುದೋ ಒಂದು ವಿಚಾರವನ್ನು ಹೇಳಿದ್ದೀರಿ. ಎಂ.ಆರ್.ಪಿ.ಎಲ್.ರವರು ಕೊಡಬೇಕಾಗಿರತಕ್ಕ ಬಾಕಿಗೆ ಹೈಕೋರ್ಟಿಗೆ ಹೋಗಿ ಸ್ಟೇ ತಂದು ಈ ಕೆಲಸವನ್ನು ಮಾಡಿದ್ದಾರೆ ಎಂದು. ಇದರ ಬಗ್ಗೆ ನಾನು ಗಮನವನ್ನು ಹರಿಸಿ ಆ ತಡೆಯಾಜ್ಞೆಯಾವುದು ಇದೆ ಅದನ್ನು ತೆರವು ಮಾಡಲಿಕ್ಕೋಸ್ಕರ ಮತ್ತು ಸರ್ಕಾರಕ್ಕಾಗಲೀ, ಕಾರ್ಪೋರೇಷನ್‌ಗಾಗಲೀ ಬರಬೇಕಾಗಿರತಕ್ಕ ತೆರಿಗೆ ಯಾವುದು ಇದೆ ಅದನ್ನು ವಸೂಲಾತಿ ಮಾಡುವಂಥದ್ದಕ್ಕೆ ನಾನೇ ವೈಯಕ್ತಿಕವಾಗಿ ಗಮನವನ್ನು ಹರಿಸುತ್ತೇನೆ.

(ಐ) ಅನುಕಂಪದ ಆಧಾರದ ಮೇಲೆ ಸ್ವೀಚ್ ಅಂಡ್ ಹಿಯರಿಂಗ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ನೌಕರನ ಪತ್ನಿಗೆ ಉದ್ಯೋಗ ನೀಡುವುದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡುವಪುರ) : ಮಾನ್ಯ ಅಧ್ಯಕ್ಷರೆ, ಸುಮಾರು 1919ನೇ ಇಸವಿಯಿಂದ ಬಹಳ ಸಫರ್ ಪಟ್ಟಿರತಕ್ಕಂಥ ಒಬ್ಬ ಮಹಿಳೆ, ಮಾಯಣ್ಣ ಎಂಬುವರು 22.12.1990ರಲ್ಲಿ ಮರಣ ಹೊಂದಿದ್ದಾರೆ, ಸ್ವೀಚ್ ಅಂಡ್ ಹಿಯರಿಂಗ್‌ನಲ್ಲಿ ಕೆಲಸ ಸೂಕ್ತ ಉದ್ಯೋಗವನ್ನು ಕೊಡಬೇಕೆಂದು ಕಮಿಟಿಯಲ್ಲಿ ತೀರ್ಮಾನ ಆಯಿತು. ಉದ್ದೇಶ ಪೂರ್ವಕವಾಗಿಯೆ ಸ್ವೀಚ್ ಅಂಡ್ ಹಿಯರಿಂಗ್‌ನಲ್ಲಿ ನಿರ್ದೇಶಕಿಯಾಗಿ ಕೆಲಸ ಮಾಡುತ್ತಿರುವಂತಹ ಮಹಿಳೆ, ಆ ಮಹಿಳೆಯ ಮೇಲೆ ವೈಯಕ್ತಿಕ ದ್ವೇಷದಿಂದ ಇದುವರೆವಿಗೂ ಅಂದರೆ 1991ರಿಂದ 1997ರವರೆಗೆ ಯಾವುದೇ ಕಾರಣಕ್ಕೂ ಆಕೆಗೆ ಉದ್ಯೋಗವನ್ನು ಕೊಟ್ಟಿಲ್ಲ. ಅವರಿಗೆ ಸೂಕ್ತವಾದ ಉದ್ಯೋಗವನ್ನು ಕೊಡದೆ ಈಗಾಗಲೇ ಸುಪ್ರೀಂ ಕೋರ್ಟಿನ ಆದೇಶವಿದೆ. ``However, without expressing an opinion on the maintainability of the Writ Retition, it is disposed of hoping that the Respondent would consider the case of petitioner to a suitable post on compassionate grounds including the fact of the law laid down by the Supreme Court in the case reported in 1991 S.C. 469. within a reasonable time" ಎಂದು ಹೇಳಿದ್ದಾರೆ. ಕಾಲವೆಂದರೆ, ಸ್ವಲ್ಪ ಕಾಲದಲ್ಲಿ

ರೀಸನಬಲ್ ಆಗಿ ಸಂಬಂಧಪಟ್ಟ ಹುದ್ದೆ ಖಾಲಿಯಾದರೆ ತಕ್ಷಣ ಕೊಡಬೇಕೆಂದು ಸುಪ್ರೀಂ ಕೋರ್ಟಿನ ಆದೇಶವಿತ್ತು. ಆದರೆ ವೈಯಕ್ತಿಕ ದ್ವೇಷದ ಮೇಲೆ ಆಕೆಯ ಮನೆಯನ್ನು ಖಾಲಿ ಮಾಡಿಸಿ, ಮನೆಯಲ್ಲಿದ್ದಂತಹ ಸಾಮಾನುಗಳನ್ನು ಆಫೀಸಿನಲ್ಲಿ ಇಟ್ಟುಕೊಂಡು, ಆ ಪದಾರ್ಥಗಳನ್ನು ಕೇಳುವುದಕ್ಕೆ ಹೋದರೆ ಆಕೆ ಅದನ್ನು ಕೊಡುತ್ತಿಲ್ಲ. ಇದಕ್ಕೆ ಕಾರಣವೇನೆಂದರೆ ಈ ಸ್ಟೀಫ್ ಅಂಡ್ ಪಿಯರಿಂಗ್ ಸಂಸ್ಥೆಗೆ ಕೇಂದ್ರ ಸರ್ಕಾರದ ಹೊಣೆಗಾರಿಕೆ ಇರುವುದರಿಂದ ಸಂಬಂಧ ಪಟ್ಟಂತಹ ಹೆಲ್ತ್ ಕಾರ್ಯದರ್ಶಿಯವರಿಗೂ ಸುಮಾರು 4-5 ಸಾರಿ ಆ ನಿರ್ದೇಶಕಿಗ ಹೇಳಿದರು. ಅವರ ಮಾತನ್ನು ತಿರಸ್ಕಾರ ಮಾಡಿದ್ದಾರೆ. ಮೈಸೂರು ಜಿಲ್ಲೆಯ ಎಂ.ಪಿ.ಗಳು ಹೇಳಿದರೂ ಅವರ ಮಾತನ್ನು ತಿರಸ್ಕಾರ ಮಾಡಿದ್ದಾರೆ. ಆಕೆ ಒಂದು ರೀತಿಯ ಹುಚ್ಚು ವರ್ತನೆಯಿಂದ ವರ್ತಿಸಿ ಆ ಮಹಿಳೆಗೆ ಕೊಡುತ್ತಿರುವಂತಹ ತೊಂದರೆಯ ಬಗ್ಗೆ ಎಷ್ಟು ಬಾರಿ ಹೋಗಿ ಮಾತನಾಡಿದರೂ ಏನೂ ಅನುಕೂಲವಾಗುತ್ತಿಲ್ಲ. ಇದು ಕೇಂದ್ರ ಸರ್ಕಾರದ ಸಂಸ್ಥೆಯಾಗಿರುವುದರಿಂದ ರಾಜ್ಯಸರ್ಕಾರದವರು ನನ್ನನ್ನು ಏನು ಮಾಡುವುದಕ್ಕಾಗುವುದಿಲ್ಲವೆನ್ನವ ಭಾವನೆ ಆಕೆಗೆ ಇದೆ. ಅದಕ್ಕೆ ಕಾರಣವೇನೆಂದರೆ ಈಗ ಕೇಂದ್ರಸರ್ಕಾರದ ರೈಲು ಕಂಬಿ ಎಂದು ಅದನ್ನು ಯಾರಾದರೂ ಬಿಚ್ಚಿಕೊಂಡು ಹೋದರೆ ರಾಜ್ಯ ಸರ್ಕಾರದವರು ಸುಮ್ಮನೆ ಇರುವುದಕ್ಕೆ ಆಗುತ್ತದೆಯೇ? ಸಾಧ್ಯವಿಲ್ಲ. ಆದುದರಿಂದ ದಯಮಾಡಿ ಆ ಮಹಿಳೆ ಬೀದಿ ಭಿಕಾರಿಯಾಗಿದ್ದಾರೆ ಮತ್ತು ಎರಡು ಮಕ್ಕಳು ಇವೆ. ಆದುದರಿಂದ ಸರ್ಕಾರ ಇದರ ಬಗ್ಗೆ ಜವಾಬ್ದಾರಿಯನ್ನು ತೆಗೆದುಕೊಂಡು ಆಕೆಗೆ ಅನ್ಯಾಯವಾಗಿರುವುದನ್ನು ಸರಪಡಿಸಬೇಕು. ಸುಪ್ರೀಂಕೋರ್ಟ್ ಆದೇಶದ ಮೇಲೆ ಅವರಿಗೆ ಉದ್ಯೋಗ ಕೊಡುವಂತಹ ವ್ಯವಸ್ಥೆಗೆ ಸರ್ಕಾರ ಪಾತ್ರವಹಿಸಿ ಆಕೆಗೆ ನ್ಯಾಯ ದೊರಕಿಸಿಕೊಡಬೇಕೆಂದು ನಾನು ಅಧ್ಯಕ್ಷರ ಮುಖಾಂತರ ಸರ್ಕಾರವನ್ನು ಮನವಿ ಮಾಡುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಇದು ನೇರವಾಗಿ ರಾಜ್ಯ ಸರ್ಕಾರಕ್ಕೆ ಬರದೇ ಹೋದರೂ ಕೂಡ ಮಾನ್ಯ ಪುಟ್ಟಣ್ಣಯ್ಯನವರು ಎತ್ತಿರುವಂತಹ ವಿಚಾರವೇನಿದೆ, ಆ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವಂತಹ ಸಹ ನಿರ್ದೇಶಕಿಯವರು ಒಬ್ಬ ಮಹಿಳೆಗೆ ಅನುಕಂಪದ ಆಧಾರದ ಮೇಲೆ ಕೊಡಬೇಕಾದಂತಹ ಕೆಲಸವನ್ನು ಸುಪ್ರೀಂಕೋರ್ಟ್‌ನ ಆದೇಶವಾಗಿದ್ದರೂ ಕೂಡ ಅದನ್ನು ತಿರಸ್ಕಾರ ಮಾಡಿರುವಂಥಾದ್ದನ್ನು ಅವರಿಗೆ ಆದೇಶವನ್ನು ಕೊಡಬೇಕಾದರೆ ಕೇಂದ್ರ ಸರ್ಕಾರದ ಮಂತ್ರಿಗಳನ್ನು ನಾವು ಸಂಪರ್ಕ ಮಾಡಬೇಕಾಗುತ್ತದೆ. ಆದುದರಿಂದ ಇದರ ಜವಾಬ್ದಾರಿಯನ್ನು ನಾನು ಆಥವಾ ಆರೋಗ್ಯ ಸಚಿವರು ಈ ವಿಚಾರವಾಗಿ ಕೇಂದ್ರ ಸರ್ಕಾರದಲ್ಲಿರುವಂತಹ ಸಂಸ್ಥೆಯ ಮುಖ್ಯಸ್ಥರಿಗೆ ಪತ್ರ ಬರೆಯುವ ಮುಖಾಂತರ ಮತ್ತು ಮಾನ್ಯ ಪ್ರಧಾನಮಂತ್ರಿಯವರಿಗೂ ಪತ್ರವನ್ನು ಬರೆಯುವುದರ ಮುಖಾಂತರ ಈ ಕೆಲಸವನ್ನು ಮಾಡುತ್ತೇವೆ. ಈ ರೀತಿ ಕೆಲಸವಾಗಿರುವಂಥಾದ್ದರ ಬಗ್ಗೆ ತಾವು ದಯಮಾಡಿ ಆ ಮಹಿಳೆಗೆ ಕೊಡಬೇಕಾದಂತಹ ಕೆಲಸವನ್ನು ಕೊಡಬೇಕೆಂದು ನಾವು ರಾಜ್ಯಸರ್ಕಾರದ ವತಿಯಿಂದ ಕಲಸ ಮಾಡುತ್ತೇವೆಂಬ ಆಶ್ವಾಸನೆಯನ್ನು ಕೊಡುತ್ತೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ತಾವು ಅನುಕಂಪದ ಆಧಾರದ ಮೇಲೆ ಕೊಡುತ್ತೇವೆಂದರೆ 15-20 ವರ್ಷಗಳಲ್ಲಿ ಕೊಡುವುದಕ್ಕೆ ಸಾಧ್ಯವೇ?

SRI M.C. NANAIAH : Please give the copy of the judgement.